**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು**

**ಸಿ. ಸಿ. ನಂಃ980/2018**

| | | | | | |
|---|---|---|---|---|---|
| ಸಾಕ್ಷಿಯ ಹೆಸರು | ಃ | ಗಂಗಾಧರ | **ದಿನಾಂಕ** | ಃ | **16/06/2023** |
| ತಂದೆಯ ಹೆಸರು | ಃ | ಸ್ವಾಮಿಗೌಡ | **ಸಿ ಡಬ್ಲ್ಯೂ** | ಃ | **02** |
| ವಯಸ್ಸು | ಃ | 40 ವರ್ಷ | **ಪಿ ಡಬ್ಲ್ಯೂ** | ಃ | **02** |
| ಉದ್ಯೋಗ | ಃ | ವ್ಯವಸಾಯ | | | |
| ವಿಳಾಸ | ಃ | ಸುಳಗೋಡುಸೋಮವಾರ ಗ್ರಾಮ | | | |

## ಪ್ರಮಾಣ ವಚನ ಬೋಧಿಸಲಾಯಿತು.
## ಮುಖ್ಯ ವಿಚಾರಣೆ ಸಸಅ ರವರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು. ಅವರು ನಮ್ಮ ಊರಿನವರು. ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ ಸಾಕ್ಷಿಯ ಅದರಲ್ಲಿನ ತನ್ನ ಸಹಿಯನ್ನು ಗುರುತಿಸಿದ ಮೇರೆಗೆ ಸದರಿ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ಸದರಿ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ನಾನು ಸುಮಾರು 5 ವರ್ಷಗಳ ಹಿಂದೆ ನಾನು ನನ್ನ ಖಾಸಗಿ ಕೆಲಸದ ನಿಮಿತ್ತ ತಾಲ್ಲೂಕು ಕಚೇರಿಗೆ ಹೋಗಿದ್ದ ಸಂದರ್ಭದಲ್ಲಿ ಪೊಲೀಸರು ಹೇಳಿದ ಮೇರೆಗೆ ಮಾಡಿರುತ್ತೇನೆ. ಅದನ್ನು ಮಾಡಿದ ದಿನಾಂಕ ಸಮಯ ನನಗೆ ನೆನಪಿಲ್ಲ. ನಿಪಿ-1 ಮತ್ತು 2 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಜೊತೆ ನಿಪಿ-1 ಮತ್ತು 2 ಕ್ಕೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನ್ಯಾಯಾಲಯದ ಮುಂದೆ ಇರುವ ಎಂ.ಓ-1 ರ ಲ್ಲಿನ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ಎಂ.ಓ-1(ಬಿ) ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ, ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಎಪಿಪಿಯವರಿಂದಃ

ದಿಃ04-05-2018 ರಂದು ಸಂಜೆ 7.15 ಗಂಟೆಯ ಸಮಯದಲ್ಲಿ ಅಬಕಾರಿ ಅಧಿಕಾರಿಗಳು ಬಂದು ಪರಿಚಯವನ್ನು ಹೇಳಿಕೊಂಡು ಸುಳಗೋಡುಸೋಮವಾರ ಗ್ರಾಮದ ಮಂಜೇಗೌಡ ಬಿನ್ ಮರೀಗೌಡ ತನ್ನ ಚಿಲ್ಲರೆ ಅಂಗಡಿಯಲ್ಲಿಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದಾಗಿ ಮಹಿತಿ ಬಂದಿರುತ್ತದೆ ಎಂದು

ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪರಿಶೀಲನೆಯ ಸಮಯದಲ್ಲಿ ಪಂಚರಾಗಿ ಬರಬೇಕು ಎಂದು ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ನಾನು ಒಪ್ಪಿರುತ್ತೇನೆ ಎಂದರೆ ಸರಿಯಲ್ಲ. ನಂತರ ಸದರಿ ಚಿಲ್ಲರೆ ಅಂಗಡಿಯ ಬಳಿ ಹೋದಾಗ, ಸದರಿ ಅಂಗಡಿ ತೆರೆದಿತ್ತು ಎಂದರೆ ಸರಿಯಲ್ಲ. ಅಂಗಡಿಯನ್ನು ಶೋಧನೆ ಮಾಡಲಾಗಿ 90 ಮಿಲಿಯ 12 ಒರಿಜಿನಲ್ ಚಾಯ್ಸ್ ಡಿಲೆಕ್ಸ್ ಬ್ರಾಂಡಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು ಕಂಡು ಬಂದವು ಎಂದರೆ ಸರಿಯಲ್ಲ. ಅವುಗಳ ಪೈಕಿ 3 ನ್ನು ಪ್ರತ್ಯೇಕಿಸಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಒಂದು ಬಿಳಿಯ ಬಟ್ಟೆಯ ಬ್ಯಾಗ್ ನಲ್ಲಿ ಹಾಕಿ ಸೀಲ್ ಮಾಡಲಾಯಿತು ಎಂದರೆ ಸರಿಯಲ್ಲ. ಅದಕ್ಕೆ ನಮ್ಮ ಗಳ ಸಹಿಗಳುಳ್ಳ ಚೀಟಿಯನ್ನು ಅಂಟಿಸಲಾಯಿತು ಎಂದರೆ ಸರಿಯಲ್ಲ. ನನ್ನ ಮತ್ತು ಚಾಸಾ-2 ರವರುಗಳ ಸಮಕ್ಷಮ ಸಂಜೆ 7.30 ರಿಂದ 8.30 ವರೆಗೆ ನಿಪಿ-1 ರಂತೆ ಮಹಜರ್ ನ್ನು ಜರುಗಿಸಿ ಸದರಿ ಎಂ.ಓ-1 ನ್ನು ಅಮಾನತ್ತು ಪಡಿಸಿಕೊಳ್ಳಲಾಯಿತು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಸ್ಥಳದಲ್ಲಿಹಾಜರಿದ್ದು ನಿಪಿ-1 ರ ಅಂಶಗಳನ್ನು ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಮೇಲೆ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆಯನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ನನಗೆ ಈಪ್ರಕರಣದ ಎಲ್ಲಾ ವಿಚಾರಗಳು ಗೊತ್ತಿದ್ದರು ಕೂಡ ಆರೋಪಿ ನಮ್ಮ ಗ್ರಾಮದವರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

( ಪಾಟೀ ಸವಾಲುಃ ಆರೋಪಿಯ ಪರ ವಕೀಲರು ಏನು ಇಲ್ಲ ಎಂದು ನುಡಿದಿರುತ್ತಾರೆ.)

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

(ಶ್ರೀಮತಿ. ಚೇತನಾ )
ಅಧಿಕ ಸಿವಿಲ್ ನ್ಯಾಯಾಧೀಶರು,
ಅರಕಲಗೂಡು.